**ಪಿ.ಡಬ್ಲ್ಯು–01**

**ಸಾಕ್ಷಿಯನ್ನು ದಿನಾಂಕಃ 07.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಆರ್.ಟಿ, ವಕೀಲರಿಂದಃ**

ನಾನು ಹುಟ್ಟಿದಾಗಿನಿಂದಲೂ ಮಾದಾಪುರದಲ್ಲಿ ವಾಸವಿರುತ್ತೇನೆ. ನಾನು ಚಿಲ್ಲರೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇನೆ. ಸದರಿ ಅಂಗಡಿ ನಮ್ಮ ಮನೆಯ ಪಕ್ಕದಲ್ಲಿರುತ್ತದೆ. ನಮ್ಮ ಮನೆ ಮುಖ್ಯರಸ್ತೆಯಲ್ಲಿರುತ್ತದೆ. ಸದರಿ ರಸ್ತೆಯಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೂ ಜನರು ಓಡಾಡುತ್ತಿರುತ್ತಾರೆ ಎಂದರೆ ಸರಿ. ಗಲಾಟೆ ನಡೆಯಿತು ಎಂದು ಹೇಳಿದ ದಿವಸ ನಾನು ಸಂಜೆ 6.00 ಗಂಟೆ ಸಮಯದಲ್ಲಿ ಅಂಗಡಿಯಲ್ಲಿದ್ದೆ. ದನಕರು ಕಟ್ಟುತ್ತಿರುವ ಜಾಗದಿಂದ ನಮ್ಮ ಮನೆಗೆ ಸುಮಾರು 1 ಕಿ.ಮೀ ದೂರವಿರುತ್ತದೆ. ಗಲಾಟೆ ನಡೆಯಿತು ಎಂದು ಹೇಳಿದ ಸಮಯದಲ್ಲಿ ನಾನು ಮತ್ತು ನನ್ನ ತಾಯಿ ಇದ್ದೆವು. ಸರ್ವೆ ನಂ. 175ರ ಜಮೀನಿನ ವಿಚಾರವಾಗಿ ಆರೋಪಿಗಳು ಗಲಾಟೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ ನಾವು ಸರ್ವೆ ನಂ. 175ರ ಜಮೀನನ್ನು ಉಳುಮೆ ಮಾಡುತ್ತಿದ್ದೆವು. ಆರೋಪಿಗಳು ಗ್ರಾಮದಲ್ಲಿ ವಾಸವಿರುತ್ತಾರೆ. 1ನೇ ಆರೋಪಿ ನಮ್ಮ ಗ್ರಾಮದಲ್ಲಿ ವಾಸವಿರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಮುಂದಿನ ಪಾಟೀಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**